INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,56-68
Peer -Reviewed, Refereed Journal

# ಹಾಸನ ತಾಲೂಕಿನ ಹೊಯ್ಸಳರ ಕಾಲದ ಶಾಸನೋಕ್ತ ವೀರಗಲ್ಲುಗಳು

* ಮನು ಜಿ.ಎಸ್.[1]
**ಪ್ರೊ.ಎಂ.ಜಿ. ಮಂಜುನಾಥ.[2]

ಮೊದಲಿನಿಂದಲೂ ಕನ್ನಡ ನಾಡು ಶೌರ್ಯ, ಧೈರ್ಯ, ಪರಾಕ್ರಮಗಳಿಗೆ ಪ್ರಸಿದ್ಧವಾಗಿದೆ. ಕರ್ನಾಟಕದಾದ್ಯಂತ ದಾನಶಾಸನಗಳನ್ನು ಬಿಟ್ಟರೆ ವೀರಗಲ್ಲುಗಳೇ ಹೆಚ್ಚಿವೆ. ಕನ್ನಡ ನಾಡಿನ ವೀರರ ಸಾಹಸಗಳ ಬಗ್ಗೆ ಹಲವಾರು ಶಾಸನೋಕ್ತ ವೀರಗಲ್ಲುಗಳು ದೊರಕುತ್ತವೆ. ಕ್ರಿ.ಶ. 500ರಲ್ಲಿ ರಚನೆಯಾಗಿರುವ 'ತಮಟಕಲ್ಲು ಶಾಸನ' ಹಾಗೂ ಕ್ರಿ.ಶ. 700ರಲ್ಲಿ 'ಕಪ್ಪೆ ಅರಭಟ್ಟನ ಶಾಸನ'ವು ತ್ರಿಪದಿಯಲ್ಲಿ ರಚಿತವಾಗಿರುವ ಮೊಟ್ಟಮೊದಲ ಶಾಸನವಾಗಿದ್ದು ವೀರನ ಗುಣ, ಸ್ವಭಾವವನ್ನು ತಿಳಿಸುತ್ತದೆ. ಪಾಶ್ಚಿಮಾತ್ಯ ವಿದ್ವಾಂಸನಾದ ' ಹ್ಯೂಯನ್ ತ್ಸಾಂಗ್' – ಅವರಿಗೆ ಅಪಮಾನವಾದರೆ ಪ್ರಾಣ ಹೋದರು ಸರಿಯೇ ಸೇಡನ್ನು ತೀರಿಸಿಕೊಳ್ಳದೆ ಬಿಡರೆಂದೂ, ಶತ್ರುವಿಗೆ ಎಚ್ಚರಕೊಟ್ಟು ಇರಿಯುವರೆಂದು, ಸೋತು ಬಂದ ದಳಪತಿಗೆ ಸ್ತ್ರೀಯರು ವೇಷ ಭೂಷಣಗಳನ್ನು ಕೊಟ್ಟು ಅವನು ಅಪಮಾನದಿಂದ ಸಾಯುವಂತೆ ಮಾಡುವರೆಂದು ಹೇಳುತ್ತಾನೆ"[1] ವೀರರ ತ್ಯಾಗ, ಬಲಿದಾನ, ಶೌರ್ಯದ ಬಗ್ಗೆ ನಮ್ಮ ನಾಡಿನ ಶಾಸನಗಳಲ್ಲದೆ ವಿದೇಶಿಯ ವಿದ್ವಾಂಸರ ಪ್ರಶಂಸೆಗಳನ್ನು ಕಾಣುತ್ತೇವೆ. ಜೀವದ ಹಂಗನ್ನು ತೊರೆದು ಗ್ರಾಮವನ್ನು ಕಳ್ಳರಿಂದ ರಕ್ಷಿಸಿ, ಗೋವು ಕಳ್ಳರ ಜೊತೆ ಹೋರಾಡಿ, ಅಬಲೆಯರ ಮೇಲೆರಗುವ ಕಾಮುಕರ ವಿರುದ್ಧ ಹೋರಾಡಿ ಹಾಗೂ ತಮ್ಮ ಅರಸರ ಪರವಾಗಿ ಹೋರಾಡಿ ಮಡಿದ ವೀರರ ಸ್ಮರಣಾರ್ಥವಾಗಿ ಹಾಕಿಸಿದ ಕಲ್ಲುಗಳನ್ನು ವೀರಗಲ್ಲುಗಳು ಎನ್ನಬಹುದು.

**ಸಾಮಾನ್ಯವಾಗಿ ವೀರಗಲ್ಲುಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು.**

1. **ಲಿಪಿಯುಕ್ತ ವೀರಗಲ್ಲುಗಳು**
2. **ಚಿತ್ರಯುಕ್ತ ವೀರಗಲ್ಲುಗಳು.**

ಶಾಸನೋಕ್ತ ವೀರಗಲ್ಲುಗಳಲ್ಲಿ ವೀರನ ಸಾಧನೆ, ಪರಾಕ್ರಮಗಳನ್ನು ಲಿಪಿಯ ರೂಪದಲ್ಲಿ

[1].ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ, ಹಾಸನ,ಮೈಸೂರು ವಿಶ್ವವಿದ್ಯಾನಿಲಯ.
[2].ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಕೆತ್ತಿರುತ್ತಾರೆ. ಚಿತ್ರಯುಕ್ತ ವೀರಗಲ್ಲುಗಳು ಐದು ಅಥವಾ ಮೂರು ಭಾಗಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಾಗಗಳಲ್ಲೂ ವೀರನ ಬಗ್ಗೆ ಹಂತ ಹಂತವಾಗಿ ಮಾಹಿತಿ ನೀಡುವ ಚಿತ್ರಗಳು ಇರುತ್ತವೆ. ಮೊದಲನೇ ಭಾಗದಲ್ಲಿ ಯುದ್ಧದಲ್ಲಿ ವೀರನು ತೊಡಗಿರುವ ಚಿತ್ರ, ಮಧ್ಯಭಾಗದಲ್ಲಿ ವೀರನ ದೇಹ ಸ್ವರ್ಗಾರೋಹಣದ ಚಿತ್ರ, ಕೊನೆಯ ಭಾಗದಲ್ಲಿ ಸ್ವರ್ಗವನ್ನು ಪ್ರತಿಬಿಂಬಿಸುವ ಚಿತ್ರಗಳ ಕೆತ್ತನೆ ಇರುತ್ತದೆ.

**ಕನ್ನಡದ ಕವಿ ತನ್ನ ಗದಾಯುದ್ದ ಕಾವ್ಯದಲ್ಲಿ**

**ತುರುಗೋಳೊಳ್ ಪೆಣ್ಬುಯ್ಯಲೊ**

**ಳೆರೆವೆಸದೊಳ್ನಂಟನೆಡರೊಳೂರರಿವಿನೊಳಂ**

**ತಲೆಗೊಂದು ಗಂಡುತನಮನೆ**

**ನೆರೆಪದವಂ ಗಂಡನಲ್ಲನೆಂತುಂ ಷಂಡಂ.**[2]

ತುರುಕಾಳಗದಲ್ಲಿ, ಪೆಣ್ಬುಯ್ಯಲ್‌ನಲ್ಲಿ, ಸ್ವಾಮಿ ಕಾರ್ಯದಲ್ಲಿ, ನೆಂಟನಿಗೆ ತೊಂದರೆ ಬಂದಾಗ, ಊರು ನಾಶವಾಗುವಾಗ, ಯಾರು ದೃಢ ನಿರ್ಧಾರ ಮಾಡಿ ತನ್ನ ಗಂಡುತನವನ್ನು ಮೆರೆಯುವುದಿಲ್ಲವೋ ಅವನು ಗಂಡಸಲ್ಲ. ನಪುಂಸಕ ಎಂಬ ಭಾವನೆ ಅಂದಿನ ಕಾಲದ ಸಮಾಜದಲ್ಲಿತ್ತು ಎಂಬುದಾಗಿದೆ. ತುರುಗಳು, ಸ್ತ್ರೀಯರು, ಊರುಗಳನ್ನು ಶತ್ರುಗಳಿಂದ ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ಮೇಲಿನ ಮಾತುಗಳ ತಾತ್ಪರ್ಯವಾಗಿದೆ.

ಹಾಸನ ಸೀಮೆಯು ಶಾಸನಗಳಿಂದ ಸಂಪತ್ಭರಿತವಾಗಿದ್ದು, ಹಲವಾರು ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟಿದೆ. ಹಾಸನ ತಾಲೂಕಿನಲ್ಲಿ ಸುಮಾರು 40ಕ್ಕೂ ಹೆಚ್ಚು ಶಾಸನೋಕ್ತ ವೀರಗಲ್ಲುಗಳಿವೆ. ಹಾಸನ ತಾಲೂಕಿನಲ್ಲಿ ಶಾಸನೊಕ್ತ ವೀರಗಲ್ಲುಗಳು ಹೇರಳವಾಗಿ ದೊರೆಯುತ್ತವೆ. ಅವುಗಳಲ್ಲಿ ತುರುಗೋಳ್, ಪೆಣ್ಬುಯ್ಯಲ್, ಕಳ್ಳರೊಂದಿಗಿನ ಹೋರಾಟದ ವೀರಗಲ್ಲುಗಳು, ಗಡಿ ಕಾಳಗದ ವೀರಗಲ್ಲುಗಳು, ಊರಳಿವಿನ ಹೋರಾಟದ ವೀರಗಲ್ಲುಗಳು, ಯುದ್ಧದ ವೀರಗಲ್ಲುಗಳು, ಆತ್ಮಬಲಿಯ ವೀರಗಲ್ಲುಗಳು

ಹೀಗೆ ವೀರ ಕೃತ್ಯಗಳ ಆಧಾರದ ಮೇಲೆ ಹಾಸನ ಸೀಮೆಯ ಜನರ ಶೌರ್ಯ ಸಾಹಸಗಳನ್ನು, ಧೈರ್ಯ ಕೀರ್ತಿಗಳನ್ನು ತಿಳಿಯಲು ಶಾಸನಗಳೆ ಆಧಾರ.

**1. ಗೋಗ್ರಹಣ ಅಥವಾ ತುರುಗೋಳ್**

ಕಳ್ಳರು ಬಂದು ದನಗಳನ್ನು ಕದಿಯುತ್ತಿದ್ದರು. ಕಳ್ಳರಿಂದ ದನಗಳನ್ನು ರಕ್ಷಿಸಲು ನಡೆದ ಯುದ್ಧವನ್ನು ತುರುಗೋಳ್ ಎಂದು ಶಾಸನಗಳು ಕರೆದಿವೆ.[3] ಊರಿನ ಜನರು ಅವುಗಳನ್ನು ರಕ್ಷಿಸಲು ಮುಂದಾಗುತ್ತಿದ್ದರು. ಈ ಸಮಯದಲ್ಲಿ ಹೋರಾಡಿ ಸತ್ತವರ ವೀರಗಲ್ಲುಗಳು ಸಾಕಷ್ಟು ದೊರಕುತ್ತವೆ.

ಗೋಗ್ರಹಣದಂತಹ ಪ್ರಸಂಗಗಳು ಮಹಾಭಾರತದಷ್ಟು ಹಳೆಯದು. ದುರ್ಯೋಧನನು ವಿರಾಟರಾಜನ ಗೋವುಗಳನ್ನು ಸೆರೆಹಿಡಿದುದ್ದನ್ನು ನಾವು ನೆನೆಯಬಹುದು.

ಗೋವುಗಳಿಗೆ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಪವಿತ್ರವಾದ ಸ್ಥಾನವನ್ನು ನೀಡಲಾಗಿದ್ದು ಇಂದಿಗೂ ಆಕಳನ್ನು ಗೋಮಾತೆ ಎಂದು ಪೂಜಿಸುತ್ತಾರೆ. ವೇದಗಳು, ಪುರಾಣಗಳು, ಧರ್ಮ ಗ್ರಂಥಗಳು ಮತ್ತು ಅನೇಕ ಸಾಹಿತ್ಯ ಕೃತಿಗಳು ಗೋವಿನ ಮಹಿಮೆಯನ್ನು ತಿಳಿಸುತ್ತವೆ. ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳು ಆಕಳಿಂದ ಸಿದ್ಧಿ ಆಗುತ್ತವೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ.[4] ಗೋವುಗಳನ್ನು ರಕ್ಷಿಸಲು ಹೋರಾಡಿ ಮಡಿದ ವೀರರ ನೆನಪಾರ್ಥವಾಗಿ ನಿಲ್ಲಿಸಿದ ತುರುಗೋಳ್ ವೀರಗಲ್ಲುಗಳು ಹಾಸನ ತಾಲೂಕಿನಲ್ಲಿ ಹೊಯ್ಸಳರ ಆಳ್ವಿಕೆಯಲ್ಲೂ ಸಹ ಕಂಡುಬರುತ್ತವೆ.

ಕ್ರಿ.ಶ.1117ರ ಕಾಲದ ವೀರಗಲ್ಲು ಶಾಸನವೂ ಭುವಗಾವುಂಡನ ಮಗ ಬೊಮ್ಮಗೊಂಡನು ಅರಸೀಕೆರೆಯಲ್ಲಿ ನಡೆದ ತುರುಕಾಳಗದಲ್ಲಿ ಮಡಿದಾಗ ಸುರಕನ್ನೆಯರು ಸುರಲೋಕಕ್ಕೆ ಕೊಂಡೊಯ್ದರು ಎಂಬ ಅಂಶವನ್ನು ಉಲ್ಲೇಖಿಸುತ್ತದೆ.[5] ಪ್ರಸ್ತುತ ಈ ವೀರಗಲ್ಲು ಶಾಸನವನ್ನು ಹಾಸನ ನಗರದ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಬೈಲಹಳ್ಳಿ ಗ್ರಾಮದ ವೀರಗಲ್ಲು ಶಾಸನವು ತುರುಕಾಳಗದಲ್ಲಿ ಯುದೆಬಾವೆ ಕುಟಾರಿಯ ವಿರುದ್ಧ ಕೂಚನು ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ. ಕ್ರಿ.ಶ.1173 ರ ಗೌಡಗೆರೆಯ ವೀರಗಲ್ಲು ಶಾಸನವು ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಗೌಡಗೆರೆಯ ತುರುಗಳನ್ನು ಅಪಹರಿಸಲು ಬಂದಾಗ ವೀರಣ ಮತ್ತು ಬಂಕ ಎಂಬುವರು ಹೋರಾಡಿ ಮಡಿದಾಗ ಮಾರಗಾವುಂಡನ ಮಗ ಮುದ್ದಯ್ಯನು ಈ ವೀರಗಲ್ಲನ್ನು ನಿಲ್ಲಿಸಿದನೆಂಬ ಮಾಹಿತಿ ದೊರೆಯುತ್ತದೆ.[6] ಉಗನೇ ಗ್ರಾಮದ ವೀರಗಲ್ಲು ಶಾಸನವು ಬೈಲಹಳ್ಳಿಯ ತುರುಗಳನ್ನು ರಕ್ಷಿಸಿ ಬಸವಗೌಡ, ಮಾರಗೌಡ, ಮಸಣಗೌಡ, ಮಾದಗಾಮುಂಡರು ವೀರ ಮರಣವನ್ನಪ್ಪಿದ ಮಾಹಿತಿಯನ್ನು ನೀಡುತ್ತದೆ.[7] ಕ್ರಿ.ಶ.1147ರ ನಿಟ್ಟೂರಿನ ವೀರಗಲ್ಲು ಶಾಸನವು ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಲೋಕಮಾಣಿ ಸೆಟ್ಟಿಯ ಮೊಮ್ಮಗ ಮಲೆಯಗಾವುಂಡನ ಮಗನಾದ ವರೆಯನು ನಿಟ್ಟೂರಿನ ಪೂರ್ವ ದಿಕ್ಕಿನ ಕೆರೆಯಲ್ಲಿ ತುರುಗಳನ್ನು ರಕ್ಷಿಸಲು ಹೋರಾಡಿ ಸ್ವರ್ಗಸ್ತನಾದನು ಎಂಬ ಮಾಹಿತಿಯನ್ನು ನೀಡುತ್ತದೆ.[8] ಪ್ರಸ್ತುತ ಈ ವೀರಗಲ್ಲು ಶಾಸನವೂ ಹಾಸನ ನಗರದ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ನಿಲ್ಲಿಸಲಾಗಿದೆ. ಕೋಡಿಹಳ್ಳಿ ಗ್ರಾಮದ ವೀರಗಲ್ಲು ಶಾಸನವೂ ತ್ರಿಬುವನ ಮಲ್ಲ, ಮಲಪರೋಳ್ ಗಂಡ ವಿಷ್ಣುವರ್ಧನ ಗಂಗವಾಡಿ 96,000 ಪ್ರದೇಶವನ್ನು ಆಳ್ವಿಕೆ ಮಾಡುತ್ತಿರುವಾಗ ನಡೆದ ತುರುಗಾಳಗದಲ್ಲಿ ಸೋಮಣ್ಣ ಎಂಬಾತನು ಶಿವಲೋಕ ಪ್ರಾಪ್ತನಾದನು ಎಂಬ ಮಾಹಿತಿಯನ್ನು ನೀಡುತ್ತದೆ.[9] ಅಮ್ಮ ಗೌಡನಹಳ್ಳಿ ಗ್ರಾಮದ ವೀರಗಲ್ಲು ಶಾಸನವು ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಅಮ್ಮ ಗೋಡಿಯ ಮಗನು ದುದ್ದದಲ್ಲಿ

ತುರುಗಳನ್ನು ಅಪಹರಿಸಲು ಹೋಗಿ ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ.[10]

**2. ಪೆಣ್ಬುಯ್ಯಲ್ ಹೋರಾಟದ ವೀರಗಲ್ಲುಗಳು**

ಪೆಣ್ಣುಯಲ್ ಎಂದರೆ ಹೆಣ್ಣಿನ ಅಸಹಾಯಕ ಆರ್ತಧ್ವನಿ ಅಥವಾ ಕೂಗು ಎಂಬರ್ಥವಿದೆ. ನೆರೆ ರಾಜ್ಯದವರು ಅಥವಾ ಕಳ್ಳರು ತುರುಗಳನ್ನು ಕದಿಯಲು ಬಂದಾಗ ಸ್ತ್ರೀಯರನ್ನು ಅಪಹರಿಸುತ್ತಿದ್ದರು. ಹಾಗೂ ಅವರ ಮಾನಭಂಗಕ್ಕೆ ಯತ್ನಿಸುತ್ತಿದ್ದರು. ಅಥವಾ ಸೀರೆ ಸೆಳೆಯುವುದರ ಮೂಲಕ ಯುದ್ಧವನ್ನು ಸಾರುತ್ತಿದ್ದರು.ಇಂತಹ ವೇಳೆಯಲ್ಲಿ ಸ್ತ್ರೀಯರ ಉಯ್ಯಲನ್ನು (ಕೂಗನ್ನು) ಕೇಳಿ ಅವರನ್ನು ರಕ್ಷಿಸಲು ಹೋರಾಡಿ ಮಡಿದ ವೀರರ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳೇ ಪೆಣ್ಬುಯ್ಯಲ್ ವೀರಗಲ್ಲುಗಳು,[11] "ಪೆಣ್ಬುಯ್ಯಲ್ ಯಾವಾಗ ಆಗುತ್ತಿದ್ದವು ಎಂಬುದನ್ನು ಹೇಳುವುದು ಕಷ್ಟ. ಯುದ್ಧಾನಂತರ ಅರಸರ ಊರುಗಳನ್ನು ಗೆದ್ದವರು ಆಕ್ರಮಿಸಿದಾಗ ನಡೆದಿರಬಹುದು ಅಥವಾ ಹೆಣ್ಣುಮಕ್ಕಳು ಒಂಟಿಯಾಗಿದ್ದಾಗ ನಡೆದಿರಬಹುದು. ಒಮ್ಮೊಮ್ಮೆ ಕೇವಲ ಸ್ತ್ರೀಯರನ್ನು ಅವಮಾನಗೊಳಿಸುವ ಉದ್ದೇಶದಿಂದಲೂ ದಾಳಿಕಾರರು ಬರುತ್ತಿದ್ದರು,[12] ಆದರೆ ಈ ರೀತಿಯ ಹುಯ್ಯಲುಗಳ ಪ್ರಸ್ತಾಪ ವೀರಗಲ್ಲುಗಳಲ್ಲಿ ಅಪರೂಪವಾದುದಾಗಿದ್ದು ಹಾಸನ ತಾಲೂಕಿನ ಕಿತ್ತನಕೆರೆ ಗ್ರಾಮದಲ್ಲಿ ಪೆಣ್ಬುಯಲ್ ವೀರಗಲ್ಲೊಂದು ಕಂಡು ಬರುತ್ತದೆ.[13] ಕ್ರಿ.ಶ.1196ರ ಈ ವೀರಗಲ್ಲು ಶಾಸನವು ಹೊಯ್ಸಳ ವೀರಬಲ್ಲಾಳನು ಕಲ್ಯಾಣಪರ್ಯಂತವಾಗಿ ರಾಜ್ಯವಾಳುತ್ತಿರುವಾಗ ಹರುವನಹಳ್ಳಿಯ ದಾರಿಯಲ್ಲಿ ಹೆಂಗಸರ ಮಾನಭಂಗದ ಪ್ರಯತ್ನವಗುತ್ತಿರುವಾಗ ಚಟ್ಟಗೌಂಡರ ಆಳಯ್ಯನ ಮಗ ಸೋಮೆಯನೂ ಅವನ ಸಂಗಡದಲ್ಲಿದ್ದ ಬೆಳ್ಳಯ್ಯ ಎಂಬುವವನೂ ಹೋರಾಡಿ ಹೆಣ್ಣುಮಕ್ಕಳ ಮಾನವನ್ನು ಕಾಪಾಡಿ ಹಿಂದಕ್ಕೆ ಕಳುಹಿಸಿ, ಅವರನ್ನು ಅಪಹರಿಸಲು ಬಂದ ಕಳ್ಳರ ಜೊತೆ ಹೋರಾಡುವಾಗ ಮಡಿಯುತ್ತಾರೆ.[14] ಇವರ ನೆನಪಿನಾರ್ಥವಾಗಿ ಸೋಮಯನ ಹಿರಿಯಣ್ಣ ಕಲ್ಲೆಯನು, ಈತನ ತಮ್ಮ ಬೆನಜೆಯನು ಮತ್ತು ಕಟ್ಟದಹಳ್ಳಿಯ ಮಾದಿಗೌಡ ಈ ಮೂವರು ಸೇರಿ ಚಟ್ಟಗೌಡರ ಕೆರೆಯ ಕೆಳಗೆ ವೀರಗಲ್ಲನ್ನು ನಿಲ್ಲಿಸಿದರೆಂದು ಶಾಸನ ಪಠ್ಯದಿಂದ ತಿಳಿದುಬರುತ್ತದೆ. ಹಾಗೂ ಈ ವೀರಗಲ್ಲಿನ ನೈವೇದ್ಯ ಮತ್ತು ಹೂಪತ್ರೆಗೆ ಗದ್ದೆಯನ್ನು ದಾನ ನೀಡಿದ ಉಲ್ಲೇಖ ಇದೇ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು" "ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾಕ್ಷಣ ವಿರ್ಧವಂಸಿನೀ ಕಾಯೇ ಕಾ ಚಿಂತ್ಯಾ ಮರಣೀ ರಣೇ" ಅಂದರೆ ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ ದೊರಕುವಳು, ಸತ್ತರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುವರು ಎಂಬ ಮಾಹಿತಿಯನ್ನು ತಿಳಿಸುತ್ತದೆ.[15]

**3. ಊರಳವಿನ ಹೋರಾಟದ ವೀರಗಲ್ಲುಗಳು:**

ಕಳ್ಳರು ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ, ಊರನ್ನು ನಾಶಪಡಿಸುತ್ತಿದ್ದುದರಿಂದ

ಇದನ್ನು 'ಊರಳಿವು' ಅಥವಾ ಊರಿನ ನಾಶ ಎಂದು ಕರೆಯಲಾಗಿದೆ.[16] ಈ ಕಳ್ಳರು ಊರಿಗೆ ನುಗ್ಗಿ, ಸಂಪತ್ತನ್ನು ಅಪಹರಿಸಿ ಊರಿಗೆ ಬೆಂಕಿಯಿಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಇದು ಊರಿಗೆ ಬಂದೊದಗಿದ ನಾಶದ ಪರಿಸ್ಥಿತಿ ಎಂದು ಪರಗಣಿಸಿ ಗ್ರಾಮದ ಜನರು, ಅಧಿಕಾರಿಗಳು ಮತ್ತು ವೀರರು ಊರಿನ ರಕ್ಷಣೆಗಾಗಿ ಮುಂದಾಗುತ್ತಿದ್ದರು. ಈ ಹೋರಾಟದಲ್ಲಿ ಮಡಿದ ವೀರರ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕಗಳನ್ನೇ ಊರಳಿವಿನ ಹೋರಾಟದ ವೀರಗಲ್ಲುಗಳೆಂದು ಕರೆಯಲಾಗಿದೆ. ಆದರೆ ಭಾರತೀಯ ಯುದ್ಧ ತಂತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕಳ್ಳರು ಮಾತ್ರವಲ್ಲದೇ ಯುದ್ಧದಲ್ಲಿ ಗೆದ್ದ ಅರಸನು ತಾನು ಆಕ್ರಮಣ ಮಾಡಿ ಗೆದ್ದ ಅರಸನ ರಾಜ್ಯವನ್ನು ಲೂಟಿ ಮಾಡುತ್ತಿದ್ದ. ಕೆಲವೊಮ್ಮೆ ಗ್ರಾಮಗಳನ್ನು ಸುಡುತ್ತಿದ್ದ ಅಂಶ ತಿಳಿಯುತ್ತದೆ. ಎರೆಯಂಗನು ಮಾಳವ ದೇಶದ ರಾಜಧಾನಿಯಾದ ಧಾರಾನಗರವನ್ನೂ, ಬಲ್ಲಾಳನು ಉಚ್ಚಂಗಿಯನ್ನು ಸುಟ್ಟ ವಿಷಯವನ್ನು ಇಲ್ಲಿ ಸ್ಮರಿಸಬಹುದು.[17] ಹೊಯ್ಸಳ ವಿಷ್ಣುವರ್ಧನನು ಘಟ್ಟದ ಪ್ರದೇಶದಲ್ಲಿ ದಾಳೀ ಮಾಡಿದಾಗ ಅಡಿಕೆ, ತೆಂಗು ಮತ್ತು ತೇಗದ ಮರಗಳನ್ನು ಸುಟ್ಟ ವಿಷಯ ಒಂದು ಕಡೆ ತಿಳಿಯುತ್ತದೆ.[18]

ಹೀಗೆ ಕಳ್ಳರು ಮಾತ್ರವಲ್ಲದೇ ಶತ್ರುರಾಜರೂ ಸಹ ದಾಳಿ ಮಾಡಿದಾಗ ಊರು ನಾಶವಾಗುತ್ತಿದ್ದರಿಂದ ಈ ಕೃತ್ಯಗಳನ್ನು ಅಂದಿನ ಜನರು ಊರಳವು ಎಂಬುದಾಗಿ ಗುರುತಿಸಿದ್ದಿರಬಹುದು. ಈ ಊರಳಿವಿನ ಹೋರಾಟದ ವೀರಗಲ್ಲುಗಳನ್ನು ಶಿಲ್ಪದ ಆಧಾರದ ಮೇಲೆ ಗುರುತಿಸುವುದು ಕಷ್ಟ ಸಾಧ್ಯ. ಆದ್ದರಿಂದ ಇವುಗಳನ್ನು ಶಾಸನದ ಪಠ್ಯದ ಮೂಲಕವೇ ಗುರುತಿಸಬೇಕಾಗುತ್ತದೆ.

**4. ಗಡಿಕಾಳಗದ ವೀರಗಲ್ಲುಗಳು:**

ಒಂದು ರಾಜ್ಯದ ಅರಸನು ತನ್ನ ಆಡಳಿತದ ವಿಧಾನಕ್ಕನುಗುಣವಾಗಿ ರಾಜ್ಯವನ್ನು ಹಲವಾರು ಭಾಗಗಳನ್ನಾಗಿ ವಿಂಗಡಿಸುತ್ತಿದ್ದನು. ಇವುಗಳಲ್ಲಿ ಗ್ರಾಮಗಳೂ ಸಹ ಒಂದು ಭಾಗವಾಗಿದ್ದು ಸ್ವತಂತ್ರ ಘಟಕಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಹಳ್ಳಿ ಹಳ್ಳಿಗಳ ನಡುವೆ ಹೋರಾಟ ನಡೆದು ಅನೇಕರು ಮಡಿಯುತ್ತಿದ್ದರೆಂದು ತಿಳಿದು ಬರುತ್ತದೆ. ಈ ಗಡಿ ಕಾಳಗದ ಶಿಲ್ಪಗಳನ್ನು ತಕ್ಷಣ ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಶಿಲ್ಪಗಳು ಸಹ ಯಾವುದೇ ವಿಶೇಷ ಲಕ್ಷಣಗಳನ್ನು ಹೊಂದಿರದೆ ಸಾಮಾನ್ಯವಾಗಿರುತ್ತದೆ. ಆದ್ದರಿಂದ ಈ ಗಡಿ ಕಾಳಗದ ವೀರಗಲ್ಲುಗಳನ್ನು ಶಾಸನ ಪಠ್ಯದಿಂದ ಮಾತ್ರ ಗುರುತಿಸಬಹುದಾಗಿದೆ.

ಹಾಸನ ತಾಲೂಕಿನ ಸಾಲಗಾಮೆ ಗ್ರಾಮದ 13–14ನೇ ಶತಮಾನದ ವೀರಗಲ್ಲು ಶಾಸನವು ಸಾಲಗಾಮೆಯ ಗಡಿಕಾಳಗದಲ್ಲಿ ಗುಮ್ಮ ಎಂಬಾತನು ಮರಣ ಹೊಂದಿದಾಗ ಈ ಗ್ರಾಮದ ಗಡಿಯ ದಕ್ಷಿಣ ದಿಕ್ಕಿನ ಕಂಡುಗ ಹೊಲವನ್ನು ಮತ್ತು ಉತ್ತರ ದಿಕ್ಕಿನ ಕಂಭ ನೂರು ಗದ್ದೆಯನ್ನು ದಾನ ನೀಡಿದ

ಅಂಶವನ್ನು ತಿಳಿಸುತ್ತದೆ.[19] ಕ್ರಿ.ಶ.1174ರ ಹೊನ್ನಾವರ ಗ್ರಾಮದ ವೀರಗಲ್ಲು ಶಾಸನವು ಹೊನ್ನಾವರ ಮತ್ತು ನಿರ್ಗುಂದದ ಗಡಿ ಕಾಳಗದಲ್ಲಿ ಭೀಮನ ಮಗ ಹೊನ್ನಗಾವುಂಡನು ಮರಣ ಹೊಂದಿದಾಗ ಹಿರಿಯ ಹಡಪದ ಹೆಗ್ಗಡೆ ಮಂಚಿಯಣ್ಣನ ಆಳ್ವಿಕೆಯಲ್ಲಿ ಮಸಣಗೌಡ ಮತ್ತು ಸಮಸ್ತ ಪ್ರಜೆಗಳು ಈ ವೀರಗಲ್ಲನ್ನು ನಿರ್ಮಿಸಿ ದಾನ ನೀಡಿದ ಅಂಶವನ್ನು ತಿಳಿಸುತ್ತದೆ.[20] ಕೋರವಂಗಲ ಗ್ರಾಮದ ಕ್ರಿ.ಶ.12ನೇ ಶತಮಾನದ ವೀರಗಲ್ಲು ಶಾಸನವು ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ದುದ್ದ ಮತ್ತು ಕೋರವಂಗಲದ ನಡುವಿನ ಗಡಿಕಾಳಗದಲ್ಲಿ ಬಿಟ್ಟಿಯೋಜನ ಮಕ್ಕಳಾದ ಬಮ್ಮೋಜ ಮತ್ತು ಮಸಣೋಜರು ಮರಣ ಹೊಂದಿದಾಗ ಅಗ್ರಹಾರವಾದ ಶಾಂತಿಗ್ರಾಮದ ಮಹಾಜನರು ಮತ್ತು ಗೌಡರು ಪರೋಕ್ಷ ವಿನಯದ ರೂಪದಲ್ಲಿ ಈ ವೀರಗಲ್ಲನ್ನು ನಿಲ್ಲಿಸಿದ ಅಂಶವನ್ನು ಉಲ್ಲೇಖಿಸಿದೆ.[21]

**5. ಕೋಟೆ ಕಾಳಗದ ವೀರಗಲ್ಲುಗಳು:**

ಕೋಟೆ ಎಂಬುದು ಪ್ರಾಚೀನ ಕಾಲದಲ್ಲಿ ರಾಜಕೀಯ ವ್ಯವಸ್ಥೆಯ ಮತ್ತು ರಕ್ಷಣೆಯ ಭಾರವನ್ನು ಹೊತ್ತಿದ್ದಂತಹ ಒಂದು ಪ್ರಮುಖ ಘಟಕವಾಗಿತ್ತು. ಕೋಟೆಯ ಸಾಮರ್ಥ್ಯದ ಮೇಲೆ ಆದಳಿತ ವ್ಯವಸ್ಥೆಯ ಅಳಿವು ಮತ್ತು ಉಳಿವು ನಿರ್ಧರಿತವಾಗುತ್ತಿತ್ತೆಂದು ತಿಳಿದು ಬರುತ್ತದೆ. ಭದ್ರವಾದ ಕೋಟೆಯಿಲ್ಲದ ರಾಜನು ಬಿರುಗಾಳಿಯ ಮುಂದಿನ ಮೋಡದ ತುಂಡುಗಳಿಗೆ ಸಮಾನನೆಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.[22] ಪ್ರಾಚೀನ ರಾಜರುಗಳು, ಅನೇಕ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ಕೋಟೆಗಳನ್ನು ವಶಪಡಿಸಿಕೊಳ್ಳುವುದರ ಜೊತೆಗೆ ಶತ್ರುರಾಜರುಗಳಿಂದ ತಮ್ಮ ಕೋಟೆಗಳನ್ನು ಉಳಿಸಿಕೊಳ್ಳಲು ಹಲವು ಯುದ್ಧಗಳನ್ನು ಸಂಘಟಿಸುತ್ತಿದ್ದರು. ಈ ಕೋಟೆಗಳ ರಕ್ಷಣೆ ಮತ್ತು ಆಕ್ರಮಣದಲ್ಲಿ ಹಲವಾರು ವೀರರು ಮಡಿಯುತ್ತಿದ್ದರು. ಹೀಗೆ ಕೋಟೆ ಕಾಳಗದಲ್ಲಿ ವೀರಮರಣವನ್ನು ಹೊಂದಿದ ವೀರರ ನೆನಪಾರ್ಥವಾಗಿ ನಿರ್ಮಿಸಿದ ವೀರಗಲ್ಲುಗಳನ್ನು ಕೋಟೆ ಕಾಳಗದ ವೀರಗಲ್ಲುಗಳೆಂದು ಕರೆಯಲಾಗಿದೆ. ಕುದುರೆಗುಂಡಿ ಗ್ರಾಮದ ಕ್ರಿ.ಶ.1140ರ ವೀರಗಲ್ಲು ಶಾಸನವು" ಹೊಯ್ಸಳ ವಿಷ್ಣುವರ್ಧನನು ಹಾನಂಗಲ್ಲಿನ ಕೋಟೆಯನ್ನು ವಶಪಡಿಸಿಕೊಂಡಗ ಈ ಕಾಳಗದಲ್ಲಿ ಬಾಳುಗಿಯ ಚಟ್ಟಯ್ಯ ಎಂಬಾತನು ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ.[23]

**6. ಕಳ್ಳರೊಂದಿಗಿನ ಹೋರಾಟದ ವೀರಗಲ್ಲುಗಳು:**

ಕಳ್ಳರೊಂದಿಗಿನ ಹೋರಾಟದ ವೀರಗಲ್ಲುಗಳನ್ನು ನಾವು ದಾರಿಗಳ್ಳರೊಂದಿಗೆ ಹೋರಾಡಿದ ವೀರರ ಮತ್ತು ಊರಿನ ಮೇಲೆ ಕಳ್ಳತನಕ್ಕಾಗಿ ಬಂದ ಕಳ್ಳರೊಡನೆ ಹೋರಾಡಿ ಮಡಿದ ವೀರರ ವೀರಗಲ್ಲುಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು. ದಾರಿಗಳ್ಳರ ಹಾವಳಿಯು ಅನಾದಿಕಾಲದಿಂದಲೂ ಇದ್ದ ಒಂದು ಸಮಸ್ಯೆಯಾಗಿದ್ದು ವಿವಿಧ ಉದ್ದೇಶಗಳಿಗೆ ಸಂಚರಿಸುತ್ತಿದ್ದ ವರ್ತಕರು, ಸಾಧುಗಳು,

ತೀರ್ಥಯಾತ್ರಿಗಳು, ಕುದುರೆ ವ್ಯಾಪಾರಿಗಳು, ಸಂಚಾರಿಗಳು ಇನ್ನೂ ಮುಂತಾದ ವರ್ಗದ ಜನರು ಈ ದಾರಿಗಳ್ಳರಿಂದ ತೊಂದರೆಗೆ ಒಳಗಾಗುತ್ತಿದ್ದರು."[24] ಹಾಸನ ತಾಲೂಕಿನ ಗೌಡಗೆರೆ ಗ್ರಾಮದ ಕ್ರಿ.ಶ.1208ರ ವೀರಗಲ್ಲು ಶಾಸನವು ಮೂರನೇ ನರಸಿಂಹನ ಆಳ್ವಿಕೆಯ ಕಾಲಘಟ್ಟದಲ್ಲಿ ಗೌಡಗೆರೆಯ ಮುದ್ದಗಾವುಂಡನ ಮಗ ಮೊಮ್ಮಗೌಡ ಗದ್ದುಂಬಳ್ಳಿಯಿಂದ ಬರುತ್ತಿರುವಾಗ ನಡೆದ ಕಾಳಗದಲ್ಲಿ ಮಡಿದ ವಿಚಾರವನ್ನು ಉಲ್ಲೇಖಿಸುತ್ತದೆ.[25] ನಿಟ್ಟೂರು ಗ್ರಾಮದ ಕ್ರಿ.ಶ.1213ರ ವೀರಗಲ್ಲು ಶಾಸನವು ಬೇಡರ ಜಕ್ಕ ಎಂಬಾತನು ಆಯದಾರಿಯಲ್ಲಿ ನಡೆದ ಕಾಳಗದಲ್ಲಿ ಮರಣ ಹೊಂದಿದಾಗ ಈತನ ಮಕ್ಕಳಾದ ದೇವಣ ಮತ್ತು ಮಾರೆಯ ಇವರು ವೀರಗಲ್ಲನ್ನು ಪ್ರತಿಷ್ಠಾಪಿಸಿದರೆಂದು ತಿಳಿಸುತ್ತದೆ.[26] ಕುದುರೆಗುಂಡಿ ಗ್ರಾಮದ ವೀರಗಲ್ಲು ಶಾಸನದಿಂದ ಭಂಡಿಮಿಟ್ಟಿಯ ಘಟ್ಟದಲ್ಲಿ ದರೋಡೆಕೋರರಿಂದ ಆಗುತ್ತಿದ್ದ ಸಮಸ್ಯೆಯನ್ನು ವಿಪ್ರರು ಕುದುರೆಗುಂಡಿಯ ಗೌಡರ ಬಳಿ ಹೇಳಿಕೊಂಡಾಗ, ಮಸಣೋಜನು ಈ ಭಂಡಿಮಿಟ್ಟೆಯ ಘಟ್ಟದಲ್ಲಿ ಕಳ್ಳರೊಂದಿಗೆ ಹೋರಾಡಿ ಮಡಿದಾಗ ಈತನ ಸಹೋದರ ಹೆಗ್ಗೋಜನು ಈ ವೀರಗಲ್ಲನ್ನು ನಿರ್ಮಿಸಿದನು.[27]

**7. ಯುದ್ಧದ ವೀರಗಲ್ಲುಗಳು:**

ಯುದ್ಧ ಎಂಬುದು ಮನುಷ್ಯನ ಸ್ವಭಾವಕ್ಕೆ ಅಂಟಿ ಬಂದ ಹುಟ್ಟು ಗುಣ. ಈ ಯುದ್ಧಗಳು ಚಕ್ರವರ್ತಿಗಳ ಮತ್ತು ಅರಸರ ಮಹತ್ವಾಕಾಂಕ್ಷೆ ಮತ್ತು ಅಸೂಯೆ ಕಾರಣಗಳಿಂದ ನಡೆಯುತ್ತಿದ್ದವು. ಯುದ್ಧದಿಂದಲೇ ತನ್ನ ಏಳಿಗೆ ಮತ್ತು ಶತ್ರುಗಳ ನಾಶ ಎಂಬುದಾಗಿ ಭಾರತದಲ್ಲಿ ಆಳಿದ ಎಲ್ಲಾ ಅರಸರೂ ಭಾವಿಸಿದ್ದರು ಎಂದು ಕಂಡು ಬರುತ್ತದೆ. ಯುದ್ಧಗಳು ಭೂಮಿ ಮತ್ತು ಸಂಪತ್ತನ್ನು ವಶಪಡಿಸಿಕೊಳ್ಳಲು ಇದ್ದಂತಹ ಪ್ರಮುಖ ಮಾರ್ಗವಾಗಿದ್ದು ಇದರಲ್ಲಿ ಸೈನ್ಯದ ಪಾತ್ರ ಬಹಳ ಪ್ರಮುಖವಾದುದು. "ಸೈನ್ಯಾತ್ ವಿನಾ ನೈವ ರಾಜ್ಯಂ ನಧನಂ ನ ಪರಾಕ್ರಮಃ" ಅಂದರೆ ಸೈನ್ಯವಿಲ್ಲದೇ ರಾಜ್ಯವಿಲ್ಲ. ಧನವಿಲ್ಲ. ಪರಾಕ್ರಮವಿಲ್ಲ"[28] ಎಂದು ಹಿಂದಿನ ಕಾಲದ ಅರಸರು ನಂಬಿದ್ದರು. ರಾಜನೊಬ್ಬನು ಯುದ್ದಕ್ಕೆ ಸಿದ್ಧವಾದರೆ ಸಾಕು ಅವನ ಉಪ್ಪನ್ನುಂಡು ಬದುಕಿದ ಸೈನಿಕರೂ ಯುದ್ಧಕ್ಕೆ ಸಿದ್ಧರಾಗುತ್ತಿದ್ದರು. ಯುದ್ಧದಲ್ಲಿ ಹೋರಾಡಿ ರಾಜನ ಉಪಕಾರವನ್ನು ತೀರಿಸುವುದು ತಮ್ಮ ಕರ್ತವ್ಯವೆಂದು ಅವರು ಭಾವಿಸಿದ್ದರಿಂದ ಇದನ್ನು ಕಾವ್ಯ ಮತ್ತು ಶಾಸನಗಳಲ್ಲಿ ಜೋಳವಾಳಿ ಎಂದು ಕರೆದಿದ್ದಾರೆ. ಯುದ್ಧಗಳಲ್ಲಿ ಅಸಂಖ್ಯಾತ ಸೈನಿಕರು ಸಾವನ್ನಪ್ಪುತ್ತಿದ್ದರು.

ಹೀಗೆ ವೀರ ಮರಣವನ್ನು ಹೊಂದಿದ ಸೈನಿಕರ ಸ್ಮರಣಾರ್ಥವಾಗಿ ನಿರ್ಮಿಸಿದ ವೀರಗಲ್ಲುಗಳೇ ಯುದ್ಧದ ವೀರಗಲ್ಲುಗಳು. ಯುದ್ಧಗಳಿಗೆ ಸಂಬಂಧಿಸಿದಂತೆ ನಮ್ಮ ನಾಡಿನ ಉದ್ದಗಲಕ್ಕೂ ಸಾವಿರಾರು ಸಂಖ್ಯೆಯ ವೀರಗಲ್ಲು ಶಾಸನಗಳು ಕಂಡು ಬರುತ್ತವೆ. ಅದೇ ರೀತಿಯಾಗಿ ಹಾಸನ ತಾಲೂಕಿನಲ್ಲೂ

ಸಹ ಹೊಯ್ಸಳರ ಆಳ್ವಿಕೆಯನ್ನು ಪ್ರತಿನಿಧಿಸುವ ಹಲವು ವೀರಗಲ್ಲು ಶಾಸನಗಳು ಕಂಡು ಬಂದಿರುತ್ತವೆ. ಬೈಲಹಳ್ಳಿ ಗ್ರಾಮದ 13ನೇ ಶತಮಾನದ ವೀರಗಲ್ಲು ಶಾಸನವು ಎರಡನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ದೇವನಮಳಲೆ ಬೆಳುತಾಳಕ ಕೊಯಳಲ್ಲಿ ನಡೆದ ಕಾಳಗದಲ್ಲಿ ಬೈಲಹಳ್ಳಿಯ ಅಯಿತಗೌಡನ ಮೊಮ್ಮಗ, ಕಾಚಕನ ಮಗ ಬಾಚಯನು ಮರಣ ಹೊಂದಿದ ಅಂಶವನ್ನು ಉಲ್ಲೇಖಿಸುತ್ತದೆ.[29] ಇದರ ಪಕ್ಕದಲ್ಲೇ ಇರುವ ಮತ್ತೊಂದು ವೀರಗಲ್ಲು ಶಾಸನವು ಮಹಾಮಂಡಳೇಶ್ವರ ಬಿಟ್ಟಿದೇವನ ಕಾಳಗ ಮತ್ತು ದಂಡನಾಯಕ ಬೊಪ್ಪದೇವನ ಹೆಸರನ್ನು ಉಲ್ಲೇಖಿಸಿದ್ದು ಮುಂದಿನ ಶಾಸನ ಪಠ್ಯ ನಷ್ಟವಾಗಿದೆ.[30] ದೊಡ್ಡಗದ್ದವಳ್ಳಿಯಲ್ಲಿ ಕಂಡು ಬಂದಿರುವ ಕ್ರಿ.ಶ.1126–27ರ ವೀರಗಲ್ಲು ಶಾಸನವು" ಮಹಾಮಂಡಳೇಶ್ವರ ಬಿಟ್ಟಿದೇವ ಮತ್ತು ಚಿಕ್ಕಬಿಟ್ಟಿದೇವ ಎಂಬ ಹೆಸರುಗಳನ್ನು ಉಲ್ಲೇಖಿಸಿದ್ದು ಬೊಪ್ಪದೇವನ ಕಾಳಗದಲ್ಲಿ ಜಯರಾಹು ಎಂಬಾತನು ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ.[31] ಈ ಶಾಸನದಲ್ಲಿ ಉಲ್ಲೇಖವಾಗಿರುವ ಚಿಕ್ಕಬಿಟ್ಟಿದೇವ ಎಂಬ ಹೆಸರಿಗೆ ಸಂಬಂಧಿಸಿದಂತೆ ನೋಡುವುದಾದರೆ ಈತನು (ಚಿಕ್ಕಬಿಟ್ಟಿದೇವ) ಮರಿಯಾನೆ ದಂಡನಾಯಕನ ಮೊಮ್ಮಗನಾಗಿದ್ದು, ಈತನನ್ನು ಅರಸ ವಿಷ್ಣುವರ್ಧನನು ಬಹಳ ಪ್ರೀತಿ ವಿಶ್ವಾಸದಿಂದ ಸ್ವಂತ ಮಗನಂತೆ ಆಧರಿಸುತ್ತಿದ್ದನೆಂದು ತಿಳಿದು ಬರುತ್ತದೆ.[32] ಉಗನೆ ಗ್ರಾಮದಲ್ಲಿ ಕಂಡು ಬಂದಿರುವ ವೀರಗಲ್ಲು ಶಾಸನವು ಎರಡನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಬಯಲಹಳ್ಳಿಯ ಗಡಿಯಲ್ಲಿ ಮಾದಗೌಂಡ ಎಂಬಾತನು ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ.[33] ಸಾಲಗಾಮೆ ಗ್ರಾಮದ ವೀರಗಲ್ಲು ಶಾಸನವು" ಹೊಯ್ಸಳರ ಬಿರುದುಗಳು ಮತ್ತು ಎರಡನೇ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸಿದ್ದು ಮುಂದಿನ ಶಾಸನ ಪಠ್ಯ ನಷ್ಟವಾಗಿದೆ.[34] ಸೀಗೆ ಗ್ರಾಮದ ಕ್ರಿ.ಶ.12–13ನೇ ಶತಮಾನದ ವೀರಗಲ್ಲು ಶಾಸನವು" ವೀರನೊಬ್ಬನು ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆಯಾದರೂ ಈತನ ಹೆಸರು ನಷ್ಟವಾಗಿದೆ. ಅದರೆ ಈತನ ನೆನಪಿನಾರ್ಥವಾಗಿ ಮಾಳಿಯ ಸೇನುಬೋವ ಮಾಕರಸ ಮತ್ತು ವೀರನ ಪತ್ನಿ ಮಾಕಬ್ಬೆಯು ವೀರಗಲ್ಲನ್ನು ನಿಲ್ಲಿಸಿದರೆಂದು ತಿಳಿಸುತ್ತದೆ.[35] ಇದೇ ಗ್ರಾಮದ ಕ್ರಿ.ಶ.1243–44ರ ವೀರಗಲ್ಲು ಶಾಸನವು ಪ್ರತಾಪ ಚಕ್ರವರ್ತಿ ಸೋಮೇಶ್ವರನ ಆಳ್ವಿಕೆಯನ್ನು ಮಾತ್ರ ಉಲ್ಲೇಖಿಸಿದ್ದು, ಮುಂದಿನ ಪಠ್ಯ ನಷ್ಟವಾಗಿದೆ.[36] ನಿಟ್ಟೂರು ಗ್ರಾಮದ ಕ್ರಿ.ಶ.221ರ ಶಾಸನವು" ಎರಡನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ವಜ್ರದೇವನ ಮೇಲೆ ಮಾಧವ ದಣ್ಣಾಯಕನು ಕನರಿಯಲ್ಲಿ ಕಾಳಗ ನಡೆಸಿದಾಗ ನಿಟ್ಟೂರಿನ ಮಾಚಗೌಡನ ಮಗ ಬೊಮ್ಮೆಯನಾಯಕನು ಹೋರಾಡಿ ಮರಣ ಹೊಂದಿದ ಸಂಗತಿಯನ್ನು ಉಲ್ಲೇಖಿಸುತ್ತದೆ.[37]

ಇದೇ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು" ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಚಾಳುಕ್ಯ ವಿಕ್ರಮ ಕಾಲದ 69ನೆಯ ಕ್ರೋಧನ ಸಂವತ್ಸರದಲ್ಲಿ ಬಿಕ್ಕಿಸೆಟ್ಟಿಯ ಮಗ ಹೋರಾಡಿ ಮಡಿದ ವಿಚಾರವನ್ನು ತಿಳಿಸುತ್ತದೆ.[38] ಕುದುರೆಗುಂಡಿಯ ಗ್ರಾಮದ ವೀರಗಲ್ಲು ಶಾಸನವೊಂದು ವೀರನರಸಿಂಹನು ದೋರಸಮುದ್ರದಿಂದ ಆಳ್ವಿಕೆ ನಡೆಸುತ್ತಿರುವಾಗ ವೀರನೊಬ್ಬನು ಕುದುರೆಗುಂಡಿಯಲ್ಲಿ ಮರಣ ಹೊಂದಿದ ವಿಷಯವನ್ನು ತಿಳಿಸುತ್ತದೆಯಾದರೂ ಶಾಸನವು ಅಸ್ಪಷ್ಟವಾಗಿದೆ. ಜೊತೆಗೆ ಈ ಶಾಸನದಲ್ಲಿ ವೀರನರಸಿಂಹನ ಆಳ್ವಿಕೆಯಲ್ಲಿ ಎಂದು ಉಲ್ಲೇಖಿಸಿರುವುದರಿಂದ ಹೊಯ್ಸಳರಲ್ಲಿ ಮೂರು ಜನ ನರಸಿಂಹರು ಆಳ್ವಿಕೆ ನಡೆಸಿರುತ್ತಾರೆ. ಆದ್ದರಿಂದ ಈ ಶಾಸನವನ್ನು ಯಾರ ಕಾಲಾವಧಿಗೆ ಅನ್ವಯಿಸಬೇಕೆಂಬುದರಲ್ಲಿ ತೊಡಕುಗಳಿವೆ.[39] ಹೊನ್ನಾವರ ಗ್ರಾಮದ ವೀರಗಲ್ಲು ಶಾಸನವು' ಹೊಯ್ಸಳ ರಾಜನೊಬ್ಬನ ಆಳ್ವಿಕೆಯನ್ನು ಉಲ್ಲೇಖಿಸಿದ್ದು ದುರಾದೃಷ್ಟವಶಾತ್ ಈ ಶಾಸನ ಪಠ್ಯದ ಸಾಲುಗಳು ನಶೀಸಿ ಹೋಗಿವೆ.[40] ಕಬ್ಬಿನಹಳ್ಳಿ ಗ್ರಾಮದ ಕ್ರಿ.ಶ.1173ರ ವೀರಗಲ್ಲು ಶಾಸನವು" ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಮಹಾಸಾಮಂತ ಕಬ್ಬಿನಕೆರೆಯ ಹಿರಿಯತಮನ ಮಗ ಮದೆಯನು ಅತಿಯಾಗೆ ಯಡಪ್ಪನ ಕಾಳಗದಲ್ಲಿ ಹೋರಾಡಿ ಸ್ವರ್ಗಸ್ತನಾದ ಬಗ್ಗೆ ಉಲ್ಲೇಖಿಸುತ್ತದೆ.[41] ಇದೇ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು ವಿಜಯ ಸಂವತ್ಸರದ ಕಲವನ್ನು ಉಲ್ಲೇಖಿಸಿರುವುದರ ಜೊತೆಗೆ ಹೊಯ್ಸಳರ ಬಿರುಗಳನ್ನು ಹೆಸರಿಸಿದ್ದು ಮುಂದಿನ ಶಾಸನ ಪಠ್ಯ ನಶಿಸಿ ಹೋಗಿರುತ್ತದೆ.[42] ಇದೇ ಸ್ಥಳದಲ್ಲಿರುವ ಮತ್ತೊಂದು ವೀರಗಲ್ಲು ಶಾಸನವು ಕ್ರಿ.ಶ.119ರಲ್ಲಿ ಹೊಯ್ಸಳ ಬಿಟ್ಟಿದೇವನು ಆಳ್ವಿಕೆ ಮಾಡುತ್ತಿರುವಾಗ ಕಬ್ಬಿನಕೆರೆಯ ಮೇಲೆ ಕನ್ನಮಹಾರಾಜನು ದಾಳೀ ಮಾಡಿದಾಗ ಏಚಗಾವುಂಡನ ಅಳಿಯ ಮಂಜಗಾವುಂಡನು ಮರಣ ಹೊಂದುತ್ತಾನೆ[43] ನಂತರ ಕ್ರಿ.ಶ.1178ರಲ್ಲಿ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಮಲ್ಲಗಾವುಂಡ, ಮಾರಗಾವುಂಡ ಮತ್ತು ಏಚಣ ಈ ಮೂವರು ಸೇರಿ ವೀರಗಲ್ಲನ್ನು ನಿಲ್ಲಿಸಿದರೆಂದು ಶಾಸನ ಪಾಠದಿಂದ ತಿಳಿದು ಬರುತ್ತದೆ.[44] ಕಬ್ಬಿನಹಳ್ಳಿ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು' ಮಸಣಯ್ಯ ಎಂಬಾತನು ಮರಣ ಹೊಂದಿದ ಅಂಶವನ್ನು ತಿಳಿಸಿದ್ದು, ಹೊಯ್ಸಳರ ಬಿರುದಾದ ಮಹಾಮಂಡಲೇಶ್ವರ, ತ್ರಿಭೂವನಮಲ್ಲ ವೀರ ಎಂದು ಹೆಸರಿಸಿದ್ದು ಮುಂದಿನ ಸಾಲಿನ ಪಠ್ಯ ನಷ್ಟವಾಗಿರುತ್ತದೆ. ನಾಲ್ಕನೇ ಸಾಲನಲ್ಲಿ ವಿಕ್ರಮಾದಿತ್ಯನ ಹೆಸರು ಮೂಡಿ ಬಂದಿರುವುದರಿಂದ, ಹೊಯ್ಸಳ ವಿಷ್ಣುವರ್ಧನನು ಎದುರಿಸಿದ ಕಲ್ಯಾಣಿ ಚಾಳುಕ್ಯ ದೊರೆ ಆರನೇ ವಿಕ್ರಮಾದಿತ್ಯನೇ ಈ ಶಾಸನದಲ್ಲಿ ಹೆಸರಿಸಿರುವ ವಿಕ್ರಮಾದಿತ್ಯನಿರಬಹುದು.[44] ಕ್ರಿ.ಶ.1276ರ ದುದ್ದ ಗ್ರಾಮದ ವೀರಗಲ್ಲು ಶಾಸನವು ಮೂರನೇ ನರಸಿಂಹನ ಆಳ್ವಿಕೆಯ ಕಾಲಘಟ್ಟದಲ್ಲಿ ಸೇವುಣರಾಯನ ಪರವಾಗಿ ಬಂದಂತಹ ಸಾಳುವ ಟಿಕ್ಕಮನ ವಿರುದ್ಧದ ಯುದ್ಧದಲ್ಲಿ ದುದ್ದದ ಹಿರಿಯ ಬಯಿಚೆಯನಾಯಕನ ಮಗ ಅಂಕಣನು ಮರಣ

ಹೊಂದಿದಾಗ ಈತನ ಅಣ್ಣ ಸಿತಗರಗಂಡ ದೇಕಯನು ವೀರಗಲ್ಲನ್ನು ನಿಲ್ಲಿಸಿದನೆಂದು ಪ್ರಸ್ತಾಪಿಸುತ್ತದೆ.[45] ಇದೇ ಸ್ಥಳದಲ್ಲಿರುವ ಮತ್ತೊಂದು ವೀರಗಲ್ಲು ಶಾಸನವು" ಮೂರನೇ ಬಲ್ಲಾಳನ ಆಳ್ವಿಕೆಯ ಕಾಲದ ಕ್ರಿ.ಶ.1131ರಲ್ಲಿ ತುರುಕರು (ಮುಸ್ಲಿಮರು) ದೋರಸಮುದ್ರಕ್ಕೆ ದಾಳಿ ಮಾಡಿದಾಗ ದುದ್ದದ ನಡೆಗೋಟೆಯ ಮಾಚಯನಾಯಕನ ಮಗ ಬಯಿಚಯ ನಾಯಕನು ವೀರಾವೇಷದಿಂದ ಹೋರಾಡಿ ಮಡಿದಾಗ ಈತನ ಮಗ ಮಾಚಯನು ವೀರಗಲ್ಲನ್ನು ಮಾಡಿಸಿದನೆಂದು ಶಾಸನ ಪಠ್ಯದಿಂದ ತಿಳಿದು ಬರುತ್ತದೆ. ಈ ಶಾಸನವನ್ನು ಕೆತ್ತಿದಾಚಾರಿ ಇಟಿಕೆಯ ನಾಯಕನ ಮಗ ನಂಗೋಜ ಎಂಬುದು ಈ ಶಾಸನದ ಕೊನೆಯ ಸಾಲಿನಿಂದ ತಿಳಿದು ಬರುತ್ತದೆ.[46] ದುದ್ದ ಗ್ರಾಮದ ಮತ್ತೊಂದು ವೀರಗಲ್ಲು ಶಾಸನವು ಮೂರನೇ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ತುರುಕನು (ಮುಲ್ಲೀಮರು) ದೋರಸಮುದ್ರಕ್ಕೆ ದಾಳಿ ಮಾಡಿದಾಗ ದುದ್ದದ ಬಯಿಚಯನಾಯಕ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ.[47] ಹೊನ್ನಮ್ಮನಹಳ್ಳಿ ಗ್ರಾಮದ ಕ್ರಿ.ಶ.12ನೇ ಶತಮಾನಕ್ಕೆ ಹೋಲಿಕೆಯಾಗುವ ವೀರಗಲ್ಲನ್ನು ನಿರ್ಮಿಸಿದ ಉಲ್ಲೇಖ ಕಂಡು ಬರುತ್ತದೆ. ಮಲ್ಲಿಗೆವಾಳು ಗ್ರಾಮದ ಕ್ರಿ.ಶ.1234–35ರ ವೀರಗಲ್ಲು ಶಾಸನವು ಎರಡನೇ ನರಸಿಂಹನ ಆಳ್ವಿಕೆಯ ಕಲದ ಜಯಸಂವತ್ಸರದಲ್ಲಿ ವೀರನೊಬ್ಬನ ಮರಣದ ಮಾಹಿತಿ ನೀಡುತ್ತದೆ.[48] ಆದರೆ ಈ ವೀರಗಲ್ಲು ಶಾಸನದ ಮುಂದಿನ ಸಾಲುಗಳು ನಶಿಸಿ ಹೋಗಿವೆ. ಇದರ ಪಕ್ಕದಲ್ಲೇ ಇರುವ ಮತ್ತೊಂದು ವೀರಗಲ್ಲು ಶಾಸನವು ಎರಡನೇ ಬಲ್ಲಾಳನ ಬಿರುದುಗಳು ಮತ್ತು ಈಗನ ಹಿರಿಯ ಅರಸಿ ಬೊಮ್ಮಲದೇವಿಯ ಹೆಸರನ್ನು ಉಲ್ಲೇಖಿಸಿದ್ದು, ಶಾಸನದ ಮುಂದಿನ ಪಠ್ಯ ಕಂಡು ಬಂದಿರುವುದಿಲ್ಲ.[49] ಇದರ ಪಕ್ಕದಲ್ಲೇ ಇರುವ ಇನ್ನೊಂದು ಶಾಸನವು ಅದುರ ಕಮಣ ಎಂಬ ವ್ಯಕ್ತಿಯನ್ನು ಹೆಸರಿಸಿದ್ದು ಮುಂದಿನ ಪಠ್ಯ ನಶಿಸಿಹೋಗಿರುತ್ತದೆ.[50] ಮಲ್ಲಗೆವಾಳು ಗ್ರಾಮದ ಈ ಮೂರು ಶಾಸನಗಳು ಕೂಡ ಭಾಗಶಃ ಭೂಮಿಯಲ್ಲಿ ಮುಚ್ಚಿಹೋಗಿದ್ದು ಮೇಲ್ಭಾಗದ ಪಟ್ಟಿಕೆ ಮತ್ತು ಇದರ ಕೆಳಗಿನ ಶಾಸನ ಸಾಲುಗಳು ಮಾತ್ರ ಕಂಡು ಬರುತ್ತವೆ.

ಹೀಗೆ ಹಾಸನ ತಾಲೂಕಿನಲ್ಲಿ ಕಂಡು ಬಂದಿರುವ ಹೊಯ್ಸಳರ ಕಾಲದ ವೀರಗಲ್ಲು ಶಾಸನಗಳಲ್ಲಿ ಇವರ ರಾಜಕೀಯ ಆಳ್ವಿಕೆಯನ್ನು ಪ್ರತಿಬಿಂಬಿಸುವ ಅತೀ ಹೆಚ್ಚು ವೀರಗಲ್ಲು ಶಾಸನಗಳು ಯುದ್ಧಗಳಿಗೆ ಸಂಬಂಧಿಸಿವೆ ಎಂಬುದು ಇದುವರೆಗೂ ಗಮನಿಸಿದ ಅಂಶಗಳ ಆಧಾರದಿಂದ ತಿಳಿದು ಬರುತ್ತದೆ.

**8. ಆತ್ಮಬಲಿಯ ವೀರಗಲ್ಲುಗಳು**

ಪ್ರಾಚೀನ ಕರ್ನಾಟಕದಲ್ಲಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳುವ ಕೆಲವು ಪದ್ಧತಿಗಳಿದ್ದವು ಇವುಗಳನ್ನು ಆತ್ಮಬಲಿದಾನ (ದೇಹತ್ಯಾಗ) ಎಂದು ಕರೆಯಲಾಗುತ್ತದೆ. ಆತ್ಮಬಲಿದಾನ ಮಾಡಿಕೊಳ್ಳುವವರು ಉತ್ಕಟವಾದ ಧೈರ್ಯ, ನಿಷ್ಠೆ ಮತ್ತು ಸ್ವಾಮಿಭಕ್ತಿಯನ್ನು ಉಳ್ಳವರಾಗಿರುತ್ತಿದ್ದರು.

ಇವರು ಮನಸ್ಸಿನಿಂದ ಹಿಂಸಾ ಮನೋಭಾವವನ್ನೂ ದ್ವೇಷ ಭಾವವನ್ನು ತೊಡೆದು ಹಾಕಿ ಸರ್ವ ಜೀವಿಗಳ ವಿಷಯದಲ್ಲಿಯೂ ಕ್ಷಮೆಯನ್ನು ತಾಳಿ, ಜೀವನದ ಅಶಾಶ್ವತೆಯನ್ನೂ, ಅರ್ಹಂತ ಮೊದಲಾದವರ ಸದ್ಗುಣಗಳನ್ನೂ, ಅವರು ಪಡೆದ ಸದ್ಗತಿಯನ್ನೂ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದರು.[51] ಅತ್ಮಬಲಿಯು ಭಾರತೀಯ ಸಮಾಜದಲ್ಲಿ ಹೆಚ್ಚು ಧಾರ್ಮಿಕ ಕಾರಣಗಳಿಗೋಸ್ಕರ ನಡೆಯುತ್ತಿದ್ದವೆಂದು ತಿಳಿದು ಬರುತ್ತದೆಯಾದರೂ, ಕೆಲವು ಸಂದರ್ಭಗಳಲ್ಲಿ ತನ್ನನ್ನು ಪೋಷಿಸಿದ ಒಡೆಯನಿಗೆ ಒಳಿತಾಗಲಿ ಎಂಬ ಭಾವನೆಯಿಂದ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸಿ ಆತ್ಮಬಲಿದಾನವನ್ನು ಮಾಡಿಕೊಳ್ಳುತ್ತಿದ್ದರು. ಹಾಸನ ತಾಲೂಕಿನ ದುದ್ದ ಗ್ರಾಮದ ಕ್ರಿ.ಶ.1173ರ ಶಾಸನವು" ವೀರ ನರಸಿಂಹನ ಆಳ್ವಿಕೆಯ ಕಾಲದಲ್ಲಿ ದುದ್ದ ಚಟ್ಟಯ ನಾಯಕನ ಮೊಮ್ಮಗ ಕೂಸಕಾಳಿಯನು ಸ್ವಾಮಿ ಕಾರ್ಯಕ್ಕಾಗಿ ಆತ್ಮಬಲಿಯನ್ನು ಮಾಡಿಕೊಂಡಾಗ ಈತನ ತಾಯಿ ಚಟ್ಟವ್ವೆಯು ಮಗನಿಗೋಸ್ಕರ ವೀರಗಲ್ಲನ್ನು ನಿರ್ಮಿಸಿದ ಮಾಹಿತಿಯನ್ನು ನೀಡುತ್ತದೆ.[52] ತನ್ನ ಅರಸನಿಗೋಸ್ಕರ ಸದಾ ಎಂತಹ ತ್ಯಾಗಕ್ಕೂ ಸಿದ್ಧವಾಗಿರುತ್ತಿದ್ದ ಒಂದು ಸೈನ್ಯ ಪಡೆಯು ತನ್ನ ಅರಸ ಮಡಿದಾಗ ಸಾವಿರಕ್ಕೂ ಸಂಖ್ಯೆಯಲ್ಲಿ ಅತ್ಮಬಲಿದಾನ ಮಡಿಕೊಂಡ ಘಟನೆ ಇತಿಹಾಸದಲ್ಲಿ ದಾಖಲಾಗಿದೆ. ಹೊಯ್ಸಳ ಎರಡನೇ ಬಲ್ಲಾಳನಿಗೆ ಗರುಡರೆಂಬ ಸೈನ್ಯ ಪಡೆಯಿದ್ದು ಇದ್ದು ಅರಸನಿಗೋಸ್ಕರ ಸದಾ ಸ್ವಾಮಿನಿಷ್ಠೆಯನ್ನು ಹೊಂದಿರುವುದರ ಜೊತೆಗೆ ಎಂತಹ ತ್ಯಾಗಕ್ಕಾದರೂ ಸಿದ್ಧವಿರುತ್ತಿದ್ದರು.ಈ ಗರುಡ ಪಡೆಯ ಮುಖ್ಯಸ್ಥ ವೀರಬಲ್ಲಾಳನ ನೆಚ್ಚಿನ ಮಂತ್ರಿ ಕುವರಲಕ್ಷ್ಮಣನಾಗಿದ್ದನು. ಎರಡನೇ ಬಲ್ಲಾಳನು ಶ್ರಿ.ಶ.1220ರಲ್ಲಿ ಮಡಿದಾಗ ಗರುಡ ಕುವರ ಲಕ್ಷ್ಮಣ ಈತನ ಪತ್ನಿ ಸುಗ್ಗಲಾದೇವಿ ಇನ್ನೂ ಮುಂತಾದ ಸಾವಿರ ಜನ ಗರುಡರು ಸಾಮೂಹಿಕವಾಗಿ ಆತ್ಯಬಲದಾನವನ್ನು ಮಾಡಿಕೊಂಡ ರೆಂಬುದು ಐತಿಹಾಸಿಕ ಆಧಾರಗಳಿಂದ ತಿಳಿದು ಬರುತ್ತದೆ.[53]

ಹಾಸನ ತಾಲೂಕು ಹೊಯ್ಸಳರ ಅರಸರ ನೇರ ಆಳ್ವಿಕೆಗೆ ಒಳಪಟ್ಟಿದ್ದು, ಇವರ ರಾಜಧಾನಿಯಾದ ದೋರಸಮುದ್ರದ ಸನಿಹದಲ್ಲೇ ಇದ್ದುದರಿಂದ ಒಂದು ಪ್ರಮುಖ ರಾಜಕೀಯ ಕ್ಷೇತ್ರವಾಗಿತ್ತು. ಇಲ್ಲಿ ಗೋವುಗಳನ್ನು ರಕ್ಷಿಸಲು, ಮಹಿಳೆಯರ ಮಾನ ಕಾಪಾಡಲು, ಗಡಿಯನ್ನು ರಕ್ಷಿಸಲು, ಶತ್ರು ರಾಜರಿಂದ ರಾಜ್ಯವನ್ನು ರಕ್ಷಿಸಲು, ಕೋಟೆಗಳನ್ನು ವಶಪಡಿಸಿಕೊಳ್ಳಲು, ತನ್ನ ಅರಸನಿಗೆ ಸ್ವಾಮಿ ನಿಷ್ಠೆಯನ್ನು ತೋರ್ಪಡಿಸಲು ಇನ್ನೂ ಮುಂತಾದ ಕಾರಣಗಳಿಗೆ ಅನೇಕ ವೀರರು ತಮ್ಮ ಪ್ರಾಣವನ್ನು ಅರ್ಪಿಸಿರುವುದರಿಂದ ಇವರ ನೆನಪಿಗಾಗಿ ಸಾಕಷ್ಟು ಸಂಖ್ಯೆಯ ವೀರಗಲ್ಲುಗಳನ್ನು ನಿರ್ಮಿಸಿರುವುದನ್ನು ನಾವು ಕಾಣಬಹುದು. ಈ ವೀರಗಲ್ಲುಗಳಿಂದ ಅಂದಿನ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ತಿಳಿಯಬಹುದಾಗಿದೆ.

**ಕೊನೆ ಟಿಪ್ಪಣಿ**

1. ಚಿದಾನಂದ ಮೂರ್ತಿ.ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ– ಪು.ಸಂ. 272
2. ಪರಶಿವಮೂರ್ತಿ ಡಿ.ವಿ – ತುರುಗೋಳ್ ಸಂಕಥನ . – ಪು.ಸಂ. 14
3. ಚಿದಾನಂದ ಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ. 312
4. ಪರಶಿವಮೂರ್ತಿ ಡಿ.ವಿ – ತುರುಗೋಳ್ ಸಂಕಥನ . – ಪು.ಸಂ.02
5. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ – 8 . ಪು.ಸಂ. 217
6. ಪೂರ್ವೋಕ್ತ – ಪು.ಸಂ. 256
7. ಪೂರ್ವೋಕ್ತ – ಪು.ಸಂ. 269
8. ಪೂರ್ವೋಕ್ತ – ಪು.ಸಂ. 284
9. ಪೂರ್ವೋಕ್ತ – ಪು.ಸಂ. 305–306
10. ಪೂರ್ವೋಕ್ತ – ಪು.ಸಂ. 412
11. ಪರಶಿವಮೂರ್ತಿ ಡಿ.ವಿ – ತುರುಗೋಳ್ ಸಂಕಥನ . – ಪು.ಸಂ.34
12. ಶೇಷ ಶಾಸ್ತ್ರಿ. ಆರ್ – ಕರ್ನಾಟಕದ ವೀರಗಲ್ಲುಗಳು – ಪು.ಸಂ. 158
13. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 . ಪು.ಸಂ. 313–314
14. ಶೇಷ ಶಾಸ್ತ್ರಿ. ಆರ್ – ಕರ್ನಾಟಕದ ವೀರಗಲ್ಲುಗಳು – ಪು.ಸಂ. 159
15. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 . ಪು.ಸಂ. 317
16. ಪರಶಿವಮೂರ್ತಿ ಡಿ.ವಿ – ತುರುಗೋಳ್ ಸಂಕಥನ . – ಪು.ಸಂ.37
17. ಶೇಷ ಶಾಸ್ತ್ರಿ. ಆರ್ – ಕರ್ನಾಟಕದ ವೀರಗಲ್ಲುಗಳು – ಪು.ಸಂ. 165
18. ವಿಲಿಯಂ ಕೊಹಿಲೋ – ದಿ ಹೊಯ್ಸಳ ವಂಶ . – ಪು.ಸಂ. 259
19. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 . ಪು.ಸಂ. 272
20. ಪೂರ್ವೋಕ್ತ – ಪು.ಸಂ. 309
21. ಪೂರ್ವೋಕ್ತ – ಪು.ಸಂ. 342
22. ಚಿದಾನಂದ ಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ. 317
23. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 290
24. ಶೇಷ ಶಾಸ್ತ್ರಿ. ಆರ್ – ಕರ್ನಾಟಕದ ವೀರಗಲ್ಲುಗಳು – ಪು.ಸಂ. 151
25. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 256–257
26. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 282
27. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 290–291
28. ಚಿದಾನಂದ ಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ. 273
29. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 253–254
30. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 254

31. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 265–266
32. ವಿಲಿಯಂ ಕೊಹಿಲೋ – ದಿ ಹೊಯ್ಸಳ ವಂಶ – ಪು.ಸಂ. 98–99
33. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ – 8 .ಪು.ಸಂ. 270
34. ಪೂರ್ವೋಕ್ತ – ಪು.ಸಂ. 272
35. ಪೂರ್ವೋಕ್ತ – ಪು.ಸಂ. 275
36. ಪೂರ್ವೋಕ್ತ – ಪು.ಸಂ. 276
37. ಪೂರ್ವೋಕ್ತ – ಪು.ಸಂ. 282–283
38. ಪೂರ್ವೋಕ್ತ – ಪು.ಸಂ. 284– 285
39. ಪೂರ್ವೋಕ್ತ – ಪು.ಸಂ. 291–292
40. ಪೂರ್ವೋಕ್ತ – ಪು.ಸಂ. 311
41. ಪೂರ್ವೋಕ್ತ – ಪು.ಸಂ. 336
42. ಪೂರ್ವೋಕ್ತ – ಪು.ಸಂ. 336–337
43. ಪೂರ್ವೋಕ್ತ – ಪು.ಸಂ. 337
44. ಪೂರ್ವೋಕ್ತ – ಪು.ಸಂ. 337– 338
45. ಪೂರ್ವೋಕ್ತ – ಪು.ಸಂ. 358
46. ಪೂರ್ವೋಕ್ತ – ಪು.ಸಂ. 359
47. ಪೂರ್ವೋಕ್ತ – ಪು.ಸಂ. 359–360
48. ಪೂರ್ವೋಕ್ತ – ಪು.ಸಂ. 429–430
49. ಪೂರ್ವೋಕ್ತ – ಪು.ಸಂ. 430
50. ಪೂರ್ವೋಕ್ತ – ಪು.ಸಂ. 430
51. ಚಿದಾನಂದ ಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ. 333
52. ಗೋಪಾಲ್ ಬಾ.ರಾ( ಸಂ) – ಎಪಿಗ್ರಾಫಿಯಾ ಕರ್ನಾಟಿಕ ಸಂ –8 .ಪು.ಸಂ. 358–359